ಇಂದು ದಿಃ13.02.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಪ್ರಕರಣವನ್ನು ಯಾವ ಉದ್ದೇಶಕ್ಕೆ ಹಾಕಿದ್ದೇನೆ ಎಂದು ನಾನು ತಿಳಿದುಕೊಂಡಿದ್ದೇನೆ. ವಕೀಲರಿಗೆ ನಾನೇ ದಾಖಲೆಗಳನ್ನು ಮತ್ತು ಮಾಹಿತಿ ಕೊಟ್ಟು ದಾವೆ ಹಾಕಿಸಿದ್ದೇನೆ ಎಂದರೆ ಸರಿ. ದಾವಾ ದಾಖಲಿಸುವ 2-3 ತಿಂಗಳ ಹಿಂದೆದಾಖಲೆಗಳನ್ನು ಹೊಂದಿಸಿಕೊಂಡಿದ್ದೆ. ಮೊದಲು ನಾನು ದಾವೆ ಹಾಕುವಾಗ 2 ಆಸ್ತಿಗಳನ್ನು ಮಾತ್ರ ಹಾಕಿದ್ದೆ ಎಂದರೆ ಸರಿಯಲ್ಲ. ನಾನು ಮೊದಲು ನಾನು ಸರ್ವೆ ನಂಬರ್ 68/1, 68/2, 83/3 ರ ಮೇಲೆ ಮಾತ್ರ ದಾವೆ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಆಸ್ತಿಗಳು ನನ್ನ ತಂದೆಯ ಮೊದಲನೆ ಹೆಂಡತಿಯ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ನಾನು ಮೊದಲು ದಾವೆ ಸಲ್ಲಿಸಿದಾಗ ಈ ಎರಡು ಆಸ್ತಿಗಳನ್ನು ಮಾತ್ರ ತೋರಿಸಿ ದಾವೆ ದಾಖಲಿಸಿದ್ದೇ ಎಂದರೆ ಸರಿಯಲ್ಲ. ದಿಃ04.01.2020 ರಲ್ಲಿ ತಿದ್ದುಪಡಿ ಅರ್ಜಿ ಸಲ್ಲಿಸಿ ನಂತರ ಉಳಿಕೆ ಆಸ್ತಿ ಸೇರಿಸಿದೆ ಎಂದರೆ ಸರಿ. ಹೊಸತಾಗಿ ಸೇರಿಸಿದ ಆಸ್ತಿಗಳು ನನ್ನ ತಂದೆಯ ತಂದೆ ಅಂದರೆ ನನ್ನ ತಾತನ ಆಸ್ತಿಗಳು ಎಂದರೆ ಸರಿ. ನನ್ನ ತಾತ ಮಾದಪ್ಪನ ಹೆಸರಿನಲ್ಲಿ ಇರುವ ಆಸ್ತಿಗಳು ಎಂದರೆ ಸರಿ. ನನ್ನ ತಾತನ ಆಸ್ತಿಯನ್ನು ದಾವೆಗೆ ಸೇರಿಸಿದ ನಂತರ ಅವರ ವಾರಸುದಾರರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನನ್ನ ತಂದೆಯನ್ನು ಬಿಟ್ಟು ಬೇರೆ ವಾರಸುದಾರರು ಇಲ್ಲದ ಕಾರಣ ಇತರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಾತನ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸುವ ಮೊದಲು ನನ್ನ ತಂದೆಯ ಅಣ್ಣ ಶಿವಣ್ಣ ದಾವೆ ಹಾಕಿದರು ಆದರೆ ಸಾಕ್ಷಿಯು ಮುಂದುವರಿದು ಶಿವಣ್ಣ ನಮ್ಮ ಸಂಬಂಧಿಯಲ್ಲ ಎಂದು ನುಡಿಯುತ್ತಾರೆ. ನಂತರ ನಾನು ಅರ್ಜಿ ಹಾಕಿ ಆ ದಾವೆಯನ್ನು ಈ ದಾವೆ ಜೊತೆ ಸೇರಿಸಿದೆ ಎಂದರೆ ಸರಿ. ಶಿವಣ್ಣ ಹಾಕಿದ ದಾವೆಯಲ್ಲಿ ನಾನು ಅರ್ಜಿ ಸಲ್ಲಿಸಿ ನನ್ನನ್ನು 21 ನೇ ಪ್ರತಿವಾದಿಯಾಗಿ ಸೇರಿಸಿ ಎಂದು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ ಡಿ 2 ಎಂದು ಗುರುತಿಸಲಾಯಿತು. ನಿ ಡಿ 2 ರಲ್ಲಿ ಸಂಪತ್ ಕುಮಾರ್ ಉ. ಕಾಳಸೋಮಪ್ಪ ಎಂದು ಬರೆಸಿಹಾಕಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಪತ್ರಗಳು ಸಂಪತ್ ಕುಮಾರ್ ವಿಳಾಸಕ್ಕೆ ಬರುತ್ತದೆ,ಕಾಳಸೋಮಪ್ಪ ಎನ್ನುವ ಹೆಸರಿಗೆ ಬರುವುದಿಲ್ಲ. ಬಸಾಪುರದಲ್ಲಿ ಹುಟ್ಟಿ ಬೆಳೆದಿದ್ದೇನೆ. ನಮ್ಮ ಊರಿನಲ್ಲಿ ಸಂಪತ್ ಕುಮಾರ್ ಉ. ಕಾಳಸೋಮಪ್ಪ ಎನ್ನುವವರು ಯಾರೂ ಇಲ್ಲ.

ಈ ಪ್ರಕರಣದಲ್ಲಿ ನಾನು ನನ್ನ ಹೆಸರನ್ನು ತಪ್ಪಾಗಿ ನೀಡಿ ಒ ಎಸ್ 112/2007 ರ ದಾವೆ ಯ ದಾಖಲೆಯನ್ನು ಪಡೆದಿದ್ದಾರೆ ಎಂದು ಈ ದಾವೆ ದಾಖಲಿಸಿದ್ದೇನೆ ಎಂದರೆ ಸರಿ.

ನನ್ನ ಪ್ರಮಾಣಪತ್ರದಲ್ಲಿ ಈ ದಾವೆಯ ಪ್ರತಿವಾದಿಗಳಾದ 4 ಮತ್ತು 5 ರವರು ಎಫ್ ಡಿ ಪಿ ಮತ್ತು ಜಾರಿ ಅರ್ಜಿ ಸಲ್ಲಿಸಿದ್ದಾರೆ ಎನ್ನುವುದು ತಿಳಿಯಿತು ಎಂದು ಬರೆಸಿದ್ದೇನೆ ಎಂದರೆ ಸರಿ. ಎಫ್ ಡಿ ಪಿ ಮತ್ತು ಜಾರಿ ಅರ್ಜಿಯಲ್ಲಿ ಪಕ್ಷಗಾರರಾಗಿ ಸೇರಿಕೊಳ್ಳಲು ತೊಂದರೆ ಇತ್ತಾ ಎಂದರೆ ನನಗೆ ಗೊತ್ತೇ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕಮ್ಮ ಮತ್ತು ಶಿವಮ್ಮನವರು ಪಡೆದ ಆದೇಶವನ್ನು ರದ್ದು ಮಾಡಲು ನಾನು ಬೇರೆ ಯಾವುದೇ ಪ್ರಕರಣ ದಾಖಲಿಸಿಲ್ಲ.

12.01.2017 ರಲ್ಲಿ ತೋರಿಸಿದ ಆಸ್ತಿಗಳು ಮತ್ತು ತಿದ್ದುಪಡಿ ಮಾಡಿ ಸೇರಿಸಿದ ಆಸ್ತಿಗಳು ಬೇರೆ ಬೇರೆ ಆಸ್ತಿಗಳು ಮತ್ತು ಅವು ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. 12.01.2017 ರಲ್ಲಿ ತೋರಿಸಿದ ಆಸ್ತಿಗಳು ಲಿಂಗಮ್ಮನ ಆಸ್ತಿಗಳು ಮತ್ತು ತಿದ್ದುಪಡಿ ಮಾಡಿ ಸೇರಿಸಿದ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಎಲ್ಲಾ ಪಿತ್ರಾರ್ಜಿತ ಆಸ್ತಿಗಳು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ದಾವೆಯಲ್ಲಿ ತೋರಿಸಿದ ಎಲ್ಲಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಅಲ್ಲ, ಕೆಲವೊಂದು ಸ್ವಯಾರ್ಜಿತ ಮತ್ತು ಕೆಲವು ಪಿತ್ರಾರ್ಜಿತ ಎಂದರೆ ಎಲ್ಲಾ ಪಿತ್ರಾರ್ಜಿತ ಆಸ್ತಿ ಎಂದು ಸಾಕ್ಷಿ ನುಡಿಯುತ್ತಾರೆ.

ಒ ಎಸ್ 57/2018 ರಲ್ಲಿ ನಾನು ಪಕ್ಷಗಾರಾನಾಗಿ ಸೇರುವ ಮೊದಲು ನಾನು ದಾವೆಯ ಎಲ್ಲಾ ವಿವರಗಳನ್ನು ತಿಳಿದುಕೊಂಡಿದ್ದೇನೆ . ಒ ಎಸ್ 57/2018 ರಲ್ಲಿ ಏನೆಲ್ಲಾ ತಕರಾರು ಸಲ್ಲಿಸಿದ್ದಾರೆಎಂದು ನಾನು ತಿಳಿದುಕೊಂಡಿಲ್ಲ. 6 ರಿಂದ 9 ನೇ ಪ್ರತಿವಾದಿಗಳನ್ನು ವಂಶವೃಕ್ಷದಲ್ಲಿ ತೋರಿಸಿರುವುದಿಲ್ಲ ಅವರು ನಮ್ಮ ವಂಶದವರು ಅಲ್ಲ. 6 ರಿಂದ 9 ನೇ ಪ್ರತಿವಾದಿಗಳು 2 ನೇ ಬಾರಿ ಸೇರಿಸಿದ ಆಸ್ತಿಯಲ್ಲಿ ನಮ್ಮ ಗಮನಕ್ಕೆ ಬಾರದಂತೆ ನನ್ನ ತಂದೆಯ ಮಕ್ಕಳು ಎಂದು ಹೇಳಿಕೊಂಡ ಕಾರಣ ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿದ್ದೇನೆ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.